International Journal of Kannada Research 2023; 9(1): 156-159




International Journal of Kannada Research
www.kannadajournal.com

ISSN: 2454–5813
IJKR 2023; 9(1): 156-159
© 2023 IJKR
www.kannadajournal.com
Received: 08-10-2022
Accepted: 11-11-2022

**ಉಮಾಶಂಕರ ಓ.ಎಂ.**
ಕನ್ನಡ ಸಹಾಯಕ ಪ್ರಾಧ್ಯಾಪಕ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಕೊಪ್ಪ, ಚಿಕ್ಕಮಗಳೂರು ಜಿಲ್ಲೆ,
ಕರ್ನಾಟಕ, ಭಾರತ

**Corresponding Author:**
**ಉಮಾಶಂಕರ ಓ.ಎಂ.**
ಕನ್ನಡ ಸಹಾಯಕ ಪ್ರಾಧ್ಯಾಪಕ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಕೊಪ್ಪ, ಚಿಕ್ಕಮಗಳೂರು ಜಿಲ್ಲೆ,
ಕರ್ನಾಟಕ, ಭಾರತ

# ಪಂಪಭಾರತದ ಕರ್ಣ

**ಉಮಾಶಂಕರ ಓ.ಎಂ.**

**ಪೀಠಿಕೆ**

'ಆದಿಪುರಾಣ'ದ ಯಶಸ್ಸು ಪಂಪನಿಗೆ ರಾಜನ ಆಸ್ಥಾನದಲ್ಲಿ ಗಟ್ಟಿನೆಲೆ ಒದಗಿಸಿತ್ತು. ಆಗ ತನ್ನ ಪ್ರಭುವಿನ ಬಯಕೆಯನ್ನು ತಣಿಸುವ ಹೊಣೆಯನ್ನು ಹೊತ್ತು ಭಾರತ ಕಥೆಯ ಪ್ರಭಾವಳಿಯಲ್ಲಿ ಅರಿಕೇಸರಿಯನ್ನು ನೆಲೆಗೊಳಿಸಲು ಅಣಿಯಾದನು. ಭಾರತ ಕಥೆಯನ್ನು ಕಟ್ಟುವಾಗ ಆತನ ಮನ ಮತ್ತು ಮತಿಯಲ್ಲಿ ವ್ಯಾಸ ಭಾರತ, ಜನಪದ ಭಾರತ ಹಾಗೂ ತನ್ನ ಕಾಲದ ಭಾರತಗಳಿದ್ದವು. ಇವುಗಳ ಅರಿವಿನ ನೆಲೆಯಲ್ಲೆ ತನ್ನ ಆಶ್ರಯದಾತನೂ ಆಪ್ತಮಿತ್ರನೂ ಒಪ್ಪುವಂತೆ, ಪಂಡಿತರು ಮೆಚ್ಚುವಂತೆ ವ್ಯಾಸ ಭಾರತವನ್ನು ಹೊಂದಿಸಿಕೊಂಡು ಹೊಸತನದಲ್ಲಿ ಕಥೆಯನ್ನು ನಿರೂಪಿಸಿದ್ದಾನೆ. ಈ ಜಾಗೃತಿಯಲ್ಲಿಯೇ ತನ್ನ ಸಮಕಾಲೀನತೆ ಹಾಗೂ ಅರಿಕೇಸರಿಯ ಜೀವನಗಾಥೆಗೆ ತಕ್ಕಂತೆ, ಆಕರವಾಗಿಸಿಕೊಂಡ ಕಥೆಯ ಆಶಯಕ್ಕೆ ಅತಿಯಾದ ಆಭಾಸವಾಗದಂತೆ ತಾರ್ಕಿಕವಾಗಿ ಭಾರತ ಕಥೆಯನ್ನು ನಿರೂಪಿಸಿದ್ದಾನೆ. ಅರ್ಜುನನ್ನು ಅರಿಕೇಸರಿಯಾಗಿಸಿಕೊಂಡು ಆಶ್ರಯದಾತನ ವಿಜಯದ ಕಥೆಯನ್ನು ಕಟ್ಟಿದರೂ ಸಮಕಾಲೀನ ಸಂಗತಿಗಳನ್ನು ತನ್ನ ಮನವನ್ನು ಕಾಡಿದ ಪಾತ್ರ ಹಾಗೂ ಸನ್ನಿವೇಶಗಳ ಮೂಲಕ ಸೂಕ್ತ ಸಂದರ್ಭಗಳಲ್ಲಿ ಅಕ್ಷರವಾಗಿಸಿದ್ದಾನೆ. ತನ್ನ ಕಾವ್ಯದ ಕೊನೆಯ ಆಶ್ವಾಸದಲ್ಲಿ ಕಾವ್ಯಾಧ್ಯಯನ ಸೂಚಿಯಂತಿರುವ 'ಚಲದೊಳ್ ದುರ್ಯೋಧನಂ...' ಪದ್ಯದಲ್ಲಿ ಸಪ್ತ ನಾಯಕರನ್ನು ಪ್ರಸ್ತಾಪಿಸಿ ಕೃಷ್ಣ–ದ್ರೌಪದಿಯಂತವರನ್ನು ಕೈಬಿಟ್ಟು ಚಿಂತಕರ ಚಾವಡಿಗೆ ವಸ್ತುವನ್ನು ಒದಗಿಸಿದ್ದಾನೆ. ಅರ್ಜುನ=ಅರಿಕೇಸರಿ ತನ್ನ ಕಥಾನಾಯಕನೆಂಬುದರ ಅರಿವಿದ್ದರೂ, ತನ್ನೆದುರಿದ್ದ ಕಟ್ಟಳೆ ಮತ್ತು ಜೋಳವಾಳಿಯ ನಡುವೆಯೂ ಕರ್ಣನನ್ನು ನಿರ್ಭಿಡೆಯಿಂದ ಮೆಚ್ಚಿದ್ದಾನೆ. ಕರ್ಣನನ್ನು ತನ್ನ ಕಾಲದ ವೀರತನ, ಸ್ವಾಮಿನಿಷ್ಠೆ ಮತ್ತು ನನ್ನಿ ಮೊದಲಾದ ಮೌಲ್ಯಗಳಿಗೆ ಆದರ್ಶವಾಗಿಸಿದ್ದಾನೆ. ಹೀಗೆ 'ಪಂಪ ತನ್ನ ಕೃತಿಯಲ್ಲಿ ತನ್ನಕಾಲದ ಆದರ್ಶ ವೀರನೊಬ್ಬನನ್ನು ಉಜ್ವಲೀಕರಿಸಿದ್ದಾನೆ, ಶಾಶ್ವತೀಕರಿಸಿದ್ದಾನೆ'(–ಡಾ.ಎಂ. ಚಿದಾನಂದಮೂರ್ತಿ). 'ಕರ್ಣರಸಾಯನಮಯಲ್ತೆ ಭಾರತಂ ' ಎಂಬಂತಹ ತನ್ನ ಎದೆಯೊಲವಿನ ಕಟ್ಟೆಯೊಡೆದ ಮಾತುಗಳ ಮೂಲಕ 'ಪಂಪ ಕರ್ಣನನ್ನು ವ್ಯಾಸಭಾರತದ ಮಿತಿಯಿಂದ ಹೊರತೆಗೆದಿದ್ದಾನೆ.'[1]

ಪಂಪನ ಕರ್ಣನನ್ನು ಕೇಂದ್ರವಾಗಿಸಿಕೊಂಡು ಭಾರತ ಕಥೆಯನ್ನು ವಿವೇಚಿದಾಗ, ಆತನಿಗೆ ಎದುರಾದ ಸನ್ನಿವೇಶಗಳು 'ಕರ್ಣ ಪರೀಕ್ಷೆ'ಯಂತೆ ತೋರುತ್ತವೆ. ನಿದರ್ಶನವಾಗಿ ಕಾನೀನನಾಗಿ ಜನನ, ಶಸ್ತ್ರ ವಿದ್ಯಾ ಪ್ರದರ್ಶನ, ಭೀಷ್ಮ ಪಟ್ಟಾಭಿಷೇಕ, ಶಲ್ಯ ಸಾರಥ್ಯ, ಕರ್ಣ ವಧೆ, ದುರ್ಯೋಧನ ವಿಲಾಪ ಸನ್ನಿವೇಶಗಳನ್ನು ಗಮನಿಸಬಹುದು. ತನ್ನ ತನು–ಮನ–ಮತಿಯನ್ನು ಹೆತ್ತವಳು, ಪೊರೆದವನು, ಅನುಜಾತರು, ಗುರುಗಳು ಹಾಗೂ ಬೇಡಿದವರಿಗಾಗಿ ಅರ್ಪಿಸಿದ ಕರ್ಣನು ಪರಿಸ್ಥಿತಿಯ ಕೈಗೊಂಬೆಯಂತಾದನು. ಇಂತಹ ಕ್ಷಣಗಳಲ್ಲಿ ಕರ್ಣನ ಮನಸ್ಥಿತಿ ಹಾಗೂ ಇದಕ್ಕೆ ಕಾರಣವಾಗುವ ಸನ್ನಿವೇಶಗಳ ಒಳಹೊರಗಿನ ನೋಟವನ್ನು ಚಿಂತಿಸುತ್ತಾ, ಪಂಪನ ಕಾಲದ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಸ್ಥಿತಿಗಳ ಪರಾಮರ್ಶೆಯನ್ನೂ ಈ ಲೇಖನದಲ್ಲಿ ಮಾಡಲಾಗುವುದು.

ಕುಂತಿಯ ಕುತೂಹಲದ ಮನವು ದುರ್ವಾಸರ ಮಂತ್ರಗಳನ್ನು ಪರೀಕ್ಷೆಗೊಡ್ಡಿದ ಪರಿಣಾಮವಾಗಿ ಸೂರ್ಯದೇವ ಪ್ರತ್ಯಕ್ಷನಾದನು. ಸೂರ್ಯಕೃಪೆಯಿಂದ ಕುಂತಿಯ ಗರ್ಭಪೂರಣವಾಯಿತು. ಮುಂದೆ ಸೂರ್ಯಸೂನುವಿನ ಜನನವಾಯಿತು. ಕುಂತಿ ವಿವಾಹ ಪೂರ್ವದಲ್ಲೇ ಮಗುವನ್ನು ಹೆತ್ತಳು. ಹೀಗೆ ಕರ್ಣಕುಂಡಲ ಮತ್ತು ರಕ್ಷಾ ಕವಚ ಸಹಿತ ಜನಿಸಿದ ಕೂಸು ಸೂತ ದಂಪತಿಗಳಾದ ಅದಿರಥ – ರಾಧೆಯರ ಪಾಲನೆಯಲ್ಲಿ 'ವಸುಶೇಷ'ನೆಂದು ಅಂಕಿತವಾಗಿ, ಅವನ ಶೌರ್ಯ ಪರಾಕ್ರಮಗಳು

[1] ಡಾ. ವಿಶ್ವನಾಥ ಕಾರ್ನಾಡ; ಪಂಪಭಾರತದ ರಾಜನೀತಿ, ಚಿಲುಮೆ, ಅಂಕಣ ಬರಹ.

ಕರ್ಣಾಕರ್ಣಿತವಾಗಲು 'ಕರ್ಣ'ನೆಂಬುದೇ ಅನ್ವರ್ಥವಾಗಿ ಬೆಳೆದನು. ಇಲ್ಲಿ 'ದೂರ್ವಾಸನ ಮಂತ್ರ, ಸೂರ್ಯ ಇಳಿದು ಬರುವುದೇ ಮೊದಲಾದವು ಸಂಕೇತಗಳನ್ನಬಹುದು. ಒಂದು ಕಾಲದ ಸಮಾಜ ಅನುಸರಿಸುತ್ತಿದ್ದ ನಡವಳಿಕೆಗಳು ಅವರ ಮುಂದಿನ ಸಮಾಜಕ್ಕೆ ತಪ್ಪಾಗಿ ಕಂಡಾಗ ಇಂಥ ಸಂಕೇತಗಳಾಗಿ ಉಳಿದುಕೊಂಡು ಬರುತ್ತವೆ.'[2]. ಹೀಗೆ ಕ್ಷತ್ರಿಯ ಮಾತೆಯಲ್ಲಿ ಜನಿಸಿದ ಕರ್ಣನು ತನ್ನ ತಪ್ಪಲ್ಲದಿದ್ದರೂ ಕಾಲ ಮತ್ತು ಸಮಾಜದ ಕಟ್ಟಳೆಗೆ ಸಿಲುಕಿ ದಿಟ ಮಾತೆಯಿಂದ ದೂರವಾಗಿ ಬೆಳೆದನು.

ಮುಂದೆ 'ಕೌರವ– ಪಾಂಡವರು ಮಾತ್ರವಲ್ಲದೆ, ಯಾದವರು ನಾನಾ ದೇಶದ ರಾಜರೂ ದ್ರೋಣಾಚಾರ್ಯರಲ್ಲಿ ಧನುರ್ವಿದ್ಯೆಯನ್ನು ಕಲಿಯಲು ಬಂದು ಆತನಲ್ಲಿ ಶಿಷ್ಯರಾದರು'[3]. ದ್ರೋಣರ ಖ್ಯಾತಿಯನ್ನು ತಿಳಿದು 'ಕೌರವರ್ಗೆಲ್ಲಂ ಪ್ರಾಣಂ ಬರ್ಪಾಕೃತಿಯೊಳೆ ಬಾಣಾಸನ ಬಾಣವಾಣಿ ಕರ್ಣಂ ಬಂದನು'[4]. ಆಶ್ರಮದಲ್ಲಿ ಎಲ್ಲರೊಡನೆ ಬೆರೆತು ವಿದ್ಯಾಭ್ಯಾಸ ನಿರತನಾದ ಕರ್ಣನಲ್ಲಿ ದುರ್ಯೋಧನನ ಸ್ನೇಹ ಸಾಮಿಪ್ಯವಾದಂತೆಯೇ ಅರ್ಜುನನಲ್ಲಿ ಕೋಪವೂ ವ್ಯಥೆಯೂ ಅಸೂಹೆಯೂ ಅಧಿಕವಾಯಿತು (ದ್ವಿತೀಯಾಶ್ವಾಸಂ– ಪ.58). ಇಲ್ಲಿ ಪಂಪನು ಕರ್ಣನ ಕಥೆಗೆ ವ್ಯಾಸ ಭಾರತದಲ್ಲಿರದ ಹೊಸ ಆಯಾಮವನ್ನು ನೀಡಿದ್ದಾನೆ. ದ್ರೋಣರು ಕ್ಷತ್ರಿಯರಿಗೆ ಮಾತ್ರ ವಿದ್ಯಾಗುರುವಾಗಿದ್ದರೆಂಬ ಆವರಣಾರ್ಥವನ್ನು ಪಲ್ಲಟಗೊಳಿಸಿದ್ದಾನೆ. ಆ ಮೂಲಕ ಸಮಕಾಲೀನದಲ್ಲಿ ಶಿಕ್ಷಣ ಪಡೆಯಲು ಇದ್ದ ನಿರ್ಬಂಧ ವಿರೋಧಿಸುವ ಧ್ವನಿಗೆ ಅಂಕಿತವಿಟ್ಟಿದ್ದಾನೆ. ಆದರೆ ವಿದ್ಯೆ ಬಯಸಿ ಬಂದು ದ್ರೋಣರಿಂದ ಶಿಷ್ಯತನಕ್ಕೆ ತಿರಸ್ಕರಿಸಲ್ಪಡುವ ಏಕಲವ್ಯನ ಪಾತ್ರದ ಚಿಂತನೆಯನ್ನು ಪಂಪನು ಮಾಡದಿರುವುದು ಕುತೂಹಲದ ಸಂಗತಿಯಾಗಿದೆ.

ದ್ರೋಣಶಿಷ್ಯರ ಶಸ್ತ್ರಾಸ್ತ್ರಗಳ ವಿದ್ಯಾ ಪ್ರದರ್ಶನ ರಂಗಕ್ಕೆ ಕರ್ಣನು ಬಂದನು. ದ್ರೋಣರಿಗೆ ನಮಸ್ಕರಿಸಿ ದಿವ್ಯಾಸ್ತ್ರಗಳನ್ನು ಸೆಳೆದು ಅರ್ಜುನನ ಬಿಲ್ಲಿನ ಪಾಂಡಿತ್ಯಕ್ಕೆ ಸಮವೆಂಬಂತೆ ತನ್ನ ಅಸ್ತ್ರ ಪ್ರೌಢಿಮೆಯನ್ನು ಪ್ರದರ್ಶಿಸಿದನು (ದ್ವಿತೀಯಾಶ್ವಾಸಂ– ಪ.74 ಮತ್ತು 75). ಬಳಿಕ ಕರ್ಣನು ಬಿರುನುಡಿಗಳಿಂದ ಅರ್ಜುನನನ್ನು ದ್ವಂದ್ವಯುದ್ಧಕ್ಕೆ ಪಂಥಾಹ್ವಾನ ನೀಡಿದನು. ಅರ್ಜುನನು ಅವನ ಪಂಥವನ್ನು ಸ್ವೀಕರಿಸಿ ಯುದ್ಧಕ್ಕೆ ಸಿದ್ಧನಾದನು. ಈ ಕೋಪಾವೇಶವನ್ನು ಗಮನಿಸುತ್ತಲೇ ದ್ರೋಣ ಮತ್ತು ಕೃಪರು ಮಧ್ಯೆ ಪ್ರವೇಶಿಸಿ ಜಾತಿಯ ಮಾತನೆತ್ತಿ ಕರ್ಣನು ಅರ್ಜುನನಿಗೆ ಸಮನಲ್ಲವೆಂದು ಘೋಷಿಸಿ ದ್ವಂದ್ವ ಕಾಳಗವನ್ನು ನಿಲ್ಲಿಸಿದರು. ಆದರೆ, ವಿದ್ಯಾ ಪ್ರದರ್ಶನದ ಮಧ್ಯದಲ್ಲಿ ಪ್ರವೇಶಿಸುವ ಕರ್ಣನನ್ನು ಆಶೀರ್ವದಿಸಿ, ಚಾಪ ಪಾಂಡಿತ್ಯ ಪ್ರದರ್ಶಿಸುವವರೆಗೂ ಮೌನವಾಗಿದ್ದ ದ್ರೋಣರು, ಕರ್ಣನ ಆವೇಶ ನುಡಿಗಳಿಗೆ ಉತ್ತರವಾಗಿ ಅರ್ಜುನನು ದ್ವಂದ್ವ ಯುದ್ಧಕ್ಕಿಳಿಯಲು ಇಬ್ಬರ ನಡುವೆ ನಿಂತು ಕುಲದ ಪ್ರಶ್ನೆ ಎತ್ತಿ ಕರ್ಣನನ್ನು ತಿರಸ್ಕರಿಸುವರು. ಇಲ್ಲಿ ದ್ರೋಣರು ಇಬ್ಬರು ವೀರರ ನಡುವಿನ ಈ ಕಾಳಗ ದುರಂತಕ್ಕೆ ದಾರಿಯಾದೀತು ಎಂಬ ಮುನ್ನೆಚ್ಚರಿಕೆಯಿಂದ ಈ ರೀತಿಯ ಮಾತುಗಳನ್ನು ನುಡಿದಂತಿಲ್ಲ. ದ್ರೋಣರ ಇಂತಹ ಮಾತುಗಳ ಹಿಂದೆ ಕ್ಷತ್ರಿಯ ಪೋಷಣೆ, ಜಾತಿ ಶ್ರೇಷ್ಠತೆಯ ಅಹಂ ಹಾಗೂ ಅನ್ನದ ಋಣವು ಕೆಲಸ ಮಾಡಿದಂತೆ ತೋರುತ್ತದೆ. ದ್ರೋಣರ ಇಂತಹ ವರ್ತನೆಯು ಕುರುಕ್ಷೇತ್ರ ಯುದ್ಧದ ಭೀಷ್ಮ ಪಟ್ಟಾಭಿಷೇಕದ ಸಮಯದಲ್ಲಿ ಕರ್ಣನ ಮಾತಿಗೆ ಕಿನಿಸಿಕೊಂಡು ಕುಲವನೆತ್ತಿ ಆಡಿದ ಮಾತುಗಳನ್ನು ಸಮರ್ಥನ ರೂಪದಲ್ಲಿ ಗಮನಿಸಬಹುದು.

ಹುಟ್ಟಿನ ಮೂಲದ ಕಾರಣವಾಗಿ ಅರ್ಹತೆಯಿಂದ ತಿರಸ್ಕೃತನಾಗುವ ಕರ್ಣನು ನಿರುತ್ತರನಾಗಿರಲು 'ಪಂಪನು ಮೊದಲ ಬಾರಿಗೆ ವಿರೋಧಪಕ್ಷದ ವಾಣಿಯಾಗಿ ದುರ್ಯೋಧನನ ಬಾಯಲ್ಲಿ ಹೀಗೆ ಹೇಳಿಸುತ್ತಾನೆ. ಕುಲಮೆಂಬುದುಂಟೆ ಬೀರಮೆ। ಕುಲಮಲ್ಲದೆ ಕುಲಮನಿಂತು ಪಿಕ್ಕದಿರಿಂ ನೀ। ಮೊಲಿದಲ್ಲಿ ಪುಟ್ಟ ಬಳೆದಿರೊ। ಕುಲಮಿರ್ದುದೆ ಕೊಡದೊಳು ಶರಸ್ತಂಬದೊಳು॥ ಈ ಮಾತುಗಳು ಅವರನ್ನೇ (ದ್ರೋಣ–ಕೃಪರನ್ನು) ನೇರವಾಗಿ ತಿವಿಯುತ್ತವೆ. ಬ್ರಾಹ್ಮಣನಾಗಿದ್ದು, ನಂತರ ಜೈನತಂದೆಯ ಮಗನಾದ ಪಂಪನಿಗೆ ಈ ಜಾತಿ, ಕುಲದ ಮಾತಿನ ಮುಳ್ಳುಗಳು ಆಗಾಗ ಚುಚ್ಚುತ್ತಿರಬೇಕು. ದುರ್ಯೋಧನನ ಈ ಮಾತುಗಳು ಅದಕ್ಕೂ ಉತ್ತರವನ್ನು ಹೇಳುತ್ತವೆ. ಯೌವನಕ್ಕೆ ಬಂದ ದುರ್ಯೋಧನನನ್ನು ಇಂಥ ಉದಾರ ವರ್ತನೆಯ ಮೂಲಕ ಪಂಪ ಪರಿಚಯಿಸುತ್ತಾನೆ. ಇದೂ ಸಾಲದೆಂಬಂತೆ ದುರ್ಯೋಧನ ಕರ್ಣನನ್ನು ಈಗಲೇ ಕುಲಜನನ್ನಾಗಿ ಮಾಡಿ ತೋರಿಸುವೆನೆಂದು ಅಂಗರಾಜ್ಯದ ಪಟ್ಟ ಕಟ್ಟುತ್ತಾನೆ.'[5] ಅಲ್ಲದೆ, ವ್ಯಕ್ತಿಯ ಹುಟ್ಟನ್ನೇ ವ್ಯಕ್ತಿತ್ವದ ಮಾನದಂಡವಾಗಿಸುವ ಸಾಂಪ್ರದಾಯಿಕ ಕ್ರಮವನ್ನು ಪಂಪನು ವಿರೋಧಿಸುತ್ತಾನೆ. ಹೀಗೆ ಪಂಪನು ಇಂತಹ ಹಲವು ಕಾವ್ಯ ಸಂದರ್ಭಗಳನ್ನು ಸಮಕಾಲೀನಗೊಳಿಸಿದ್ದಾನೆ. ಇಲ್ಲಿ 'ವಾಸ್ತವವಾಗಿ ಪಂಪನಿಗೆ ಮುಖ್ಯವಾದುದು ಮಹಾಭಾರತವಲ್ಲ, ತನ್ನ ಎದುರಿನ ತನ್ನ ಕಾಲದ ಭಾರತ; ಅದರಲ್ಲಿನ ತನ್ನ ಅನುಭವ'[6] ಎಂಬುದು ಋಜುವಾತಾಗುತ್ತದೆ.

ಕೃಷ್ಣನು ಕರ್ಣನಿಗೆ ಆತನ ಜನ್ಮ ವೃತ್ತಾಂತವನ್ನು ತಿಳಿಸುವ ಸಮಯವು ರಾಜಕೀಯ ತಂತ್ರವಾಗಿದೆ. ಕೃಷ್ಣನಿಗೆ ಕರ್ಣನ ನಿಷ್ಠೆ ಬದಲಾಗದೆಂಬುದರ ಖಚಿತತೆಯಿದೆ. ಆದರೆ, ಜನ್ಮ ವೃತ್ತಾಂತದ ಮೂಲಕ ಮಾತೆ–ಸೋದರರೆಂಬ ಕೌಟುಂಬಿಕ ಸಂಗತಿಗಳನ್ನು ಮುಂದಿಟ್ಟು ಆತನ ಮನವನ್ನು ಕ್ಷೋಭೆಗೊಳಿಸಿ, ಯುದ್ಧೋತ್ಸಾಹವನ್ನು ಮುರಿಯುವನು. ಸಂಧಾನದ ವಿಫಲತೆಯ ಬಳಿಕ ಕೃಷ್ಣನು ಕುಂತಿಯನ್ನು ಸಂಧಿಸಿ '...ಆತನಂ ನಾನುಮೆನ್ನ ಬಲ್ಲ ಮಾಳ್ಕೆಯಿಂ ಭೇದಿಸಿದಪ್ಪೆಂ ನೀಮುಂ ನಿಮ್ಮ ಚೊಚ್ಚಿಲಮಗನಪ್ಪ ಸೂರ್ಯಸೂನುವಂ ಸೂರ್ಯದಿನದಂದು ಕಂಡು ಕಾರ್ಯಸಿದ್ಧಿಯಂ ಮಾಡಿ ಬನ್ನಿಮೆಂದು'[7] ಹೇಳುವ ಮಾತಿನ ಹಿಂದೆ ಕೌರವನ ಶಕ್ತಿ ಮತ್ತು ಸ್ವಾಮಿ ನಿಷ್ಠನಾದ ಕರ್ಣನ ಚಿತ್ತವೃತ್ತಿಯನ್ನು ಪಲ್ಲಟಗೊಳಿಸುವ ಹುನ್ನಾರ ಕಾಣುತ್ತದೆಯೇ ಹೊರತು ಮಾತೃ ವಾತ್ಸಲ್ಯ ಮತ್ತು ಭಾವ– ಮೈದುನರ ಪ್ರೀತಿಯಲ್ಲ. ಯುದ್ಧವಿಲ್ಲದೆ ದಾಯಾದಿ ಮತ್ಸರವನ್ನು ಕೊನೆಗಾಣಿಸಿ ಧರ್ಮವನ್ನು ನೆಲೆಗೊಳಿಸುವ ಇಚ್ಛೆಯು ಆತನಲ್ಲಿ ಕಾಣುತ್ತಿಲ್ಲ. ಅಂತಹ ಇಚ್ಛೆಯಿದ್ದಲ್ಲಿ ಕರ್ಣನ ಜನ್ಮ ವೃತ್ತಾಂತವನ್ನು ಕರ್ಣನಿಗೂ ಮೊದಲು ಪಾಂಡವರಿಗೆ ಮತ್ತು ಕೌರವ ಪ್ರಮುಖರಿಗೆ ಅರ್ಥಮಾಡಿಸಬಹುದಿತ್ತು. ಆ ಮೂಲಕ ಮಹಾಯುದ್ಧವನ್ನು ತಪ್ಪಿಸಬಹುದಾದ ಸಾಧ್ಯತೆ ಸಂಧಾನದ ವಿಫಲದ ಬಳಿಕ ಮತ್ತೊಂದು ಅವಕಾಶ ಕೃಷ್ಣನ ಬತ್ತಳಿಕೆಯಲ್ಲಿತ್ತು. ಆದರೆ ಅದು ಪ್ರಯೋಗಗೊಂಡ ರೀತಿ ಮಾತ್ರ ವ್ಯತಿರಿಕ್ತವಾಗಿತ್ತು. ಅದು ರಾಧೆಯನನ್ನು ಬಲಿಪಶುವಾಗಿಸುವಲ್ಲಿ, ದ್ವಂದ್ವಚಿತ್ತನ್ನನ್ನಾಗಿಸುವಲ್ಲಿ ಯಶಪಡೆಯಿತು. ಕೃಷ್ಣನರುವಿದ ನುಡಿಯನಾಲಿಸಿದ ರಾಧೆಯನಿಗೆ ರಕ್ತಸಂಬಂಧ ಮತ್ತು

[2] ಸಿ. ವೀರಣ್ಣ; ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿಗೆ–1, ಪುಟ ಸಂ.146.

[3] ದ್ವಿತೀಯಾಶ್ವಾಸಂ– ಪ.56; ಪಂಪ ಮಹಾಕವಿ ವಿರಚಿತ ಪಂಪಭಾರತಂ, ಗದ್ಯಾನುವಾದ: ಎನ್. ಅನಂತರಂಗಾಚಾರ್.

[4] (ದ್ವಿತೀಯಾಶ್ವಾಸಂ– ಪ.57)

[5] ಸಿ. ವೀರಣ್ಣ; ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿಗೆ–1, ಪು. 151 ಮತ್ತು 152.

[6] ಕೆ.ವಿ. ಸುಬ್ಬಣ್ಣ; ಪಂಪನ ಕವಿತೆ ಅನುಸಂಧಾನಕ್ಕೆ ಹೊಸಮಾರ್ಗ; ಪಂಪ ಒಂದು ಅಧ್ಯಯನ, ಸಂ: ಜಿ.ಎಸ್. ಶಿವರುದ್ರಪ್ಪ, ಪು.278

[7] (ನವಮಾಶ್ವಾಸಂ, ವಚನ, ಪು.433)

ಸ್ನೇಹಬಂಧಗಳ ಅಡಕತ್ತಿನಲ್ಲಿ ಸಿಲುಕಿದ ಸ್ಥಿತಿಯಾಯಿತು. 'ಮುನ್ನೆ ನೀವಿದನೆನಗೇಕೆ ಪೇಳ್ದಿರೋ'ಎಂದು ಸಂಕಟಪಟ್ಟು, ಕೌರವನ್ನು ನೆನೆದು 'ಕುರುಪತಿಗಿಲ್ಲ ದೈವಬಲಂ' ಎಂದು ಮರುಗಿದನು. ಕಾದಾಡಲು ಖಡ್ಗವೆತ್ತಲು ಎದುರಿರುವವರು ಸೋದರರು; ಕೊಲ್ಲದೆ ಬಿಟ್ಟರೆ ಮಿತ್ರ ದುರ್ಯೋಧನನ ಪಾಲಿಗೆ ಸೋಲು ಖಚಿತ. ಹೀಗೆ ಕರ್ಣನ ಚಿತ್ತ ತನ್ನ ಸ್ಥಿಮಿತವನ್ನು ಕಳೆದುಕೊಂಡಿತು. ಸ್ವಾಮಿನಿಷ್ಠೆಯನ್ನೂ ತೊರೆಯದೆ ಕಾಳಗಕ್ಕಿಳಿದು ತನ್ನೊಡಲನ್ನೇ ಅರ್ಪಿಸಲಿಚ್ಛಿಸಿದ ಮತ್ತು ಭ್ರಾತೃಗಳನ್ನು ಪೊರೆಯಲು ನಿರ್ಧರಿಸುವ ಕರ್ಣನ ನಿರ್ಧಾರದಲ್ಲಿ ನಷ್ಟದ ಬಹುಪಾಲು ಕೌರವ ಪಾಳೆಯಕ್ಕಾಯಿತು. ಕೃಷ್ಣನ ಕಾರ್ಯತಂತ್ರವು ಯಶಸ್ಸಿನ ದಡವನ್ನು ಸೇರಲಾರಂಭಿಸಿತು. ಪರಿಸ್ಥಿತಿ ಯಾವುದೇ ಇರಲಿ 'ಒಡಲುಂ ಪ್ರಾಣಮುಮೆಂಬಿವು ಕಿಡಲಾದವು ಜಸಮೊಂದೆ ಕೆಡದು– ಎನ್ನುವ ಪಂಪನ ಕರ್ಣ ಒಡಲು–ಪ್ರಾಣ ಅಶ್ವಾಶತ, ಕೀರ್ತಿಯೊಂದೆ ಶಾಶ್ವತ'[8] ಎಂಬಂತೆ ಬಾಳಿದನು.

ಕುರುಕ್ಷೇತ್ರ ಯುದ್ಧಕ್ಕೆ ಭೀಷ್ಮರು ನಾಯಕರಾದರೆ ತಮ್ಮ ಗೆಲುವು ಸಾಧಿತವಾಗುವುದರ ಬಗ್ಗೆ ಅಂಗಾದಿಪತಿನಲ್ಲಿ ಅಳುಕಿದೆ. ಆದ್ದರಿಂದ ಅವರ ದೇಹ ದೌರ್ಬಲ್ಯ, ಮನೋ ದೌರ್ಬಲ್ಯವನ್ನು ಎಣಿಸಿ ಭೀಷ್ಮಪಟ್ಟವನ್ನು ಕಟುಮಾತುಗಳಿಂದ ವಿರೋಧಿಸಿದನು. ಕರ್ಣನ ಮಾತುಗಳಿಗೆ ದ್ರೋಣರು ಆಕ್ಷೇಪಿಸಿ ಸಿಡಿನುಡಿಗಳಿಂದ ಕರ್ಣನು ಕುಲಹೀನ ಎನ್ನುವ ತಾತ್ಪರ್ಯದಲ್ಲಿ ಉತ್ತರಿಸಿದರು. ಆಗ ಗುರುಗಳ ಕಠೋರ ನುಡಿಗಳಿಗೆ ಕಿನಿಸಿಕೊಂಡ ಕರ್ಣನು ಕುಲವೆತ್ತಿ ಆಡಿದ ಮಾತನ್ನು ಖಂಡಿಸಿ ಕುಲವೆಂಬುದಕ್ಕೆ ಹೊಸಭಾಷ್ಯ ಬರೆದನು (ಪಂಪನು ಕರ್ಣನ ಧ್ವನಿಯಲ್ಲಿ ನಿಂತು ಹೇಳಿದ್ದಾನೆ). 'ಕುಲವೆನ್ನುವುದು ಹುಟ್ಟಿನಿಂದ ಬರುವುದಿಲ್ಲ. ಶೀಲದಿಂದ ಬರುತ್ತದೆ ನಡೆ ನುಡಿಗಳ ಮೇಲೆ ಅದು ನಿರ್ಧಾರವಾಗುತ್ತದೆ. ಛಲ, ಗುಣ, ಅಭಿಮಾನ, ಅಣ್ಮು ಇವು ಯಾರಲ್ಲಿವೆಯೋ ಅವನು ಕುಲೀನ ಎನ್ನುವ ಮಾತು ರತ್ನದಂತಹ ಮಾತು. ಕರ್ಣನು ಹೇಳಿರುವುದರಿಂದ ಈ ವಾಕ್ಯಮಾಣಿಕ್ಯ ಅಮೂಲ್ಯವಾಗಿದೆ'.[9] ಆದರೆ ಈ ಸಂದರ್ಭದಲ್ಲಿ ದುರ್ಯೋಧನನ ಮೌನವು ಶಂಕೆಮೂಡಿಸುತ್ತದೆ. ಕಾರಣ, ಶಸ್ತ್ರಾಸ್ತ್ರ ವಿದ್ಯಾ ಪ್ರದರ್ಶನ ಸಮಯದಲ್ಲಿ ಜಾತಿ ಮಾತುಗಳಿಂದ ದ್ರೋಣ–ಕೃಪರು ಮೊದಲಿಸಿ ಅವಮಾನಿಸಿದಾಗ ದುರ್ಯೋಧನನು ಎಲ್ಲರನ್ನು ದಿಕ್ಕರಿಸಿ ಕರ್ಣನಿಗೆ ಅಂಗರಾಜ್ಯದ ಪಟ್ಟ ಕಟ್ಟಿದನು. ಕುರುಕ್ಷೇತ್ರ ಯುದ್ಧ ಪಟ್ಟಾಭಿಷೇಕದ ಸಭೆಯಲ್ಲಿ ಅದೇ ಜನ ಮತ್ತೆ ಕರ್ಣನನ್ನು ಜಾತಿ ಮಾತುಗಳಿಂದ ಅವಮಾನಿಸಿದಾಗ ಯಾವ ಪ್ರತಿಕ್ರಿಯೆ ನೀಡದೆ ಭೀಷ್ಮರಿಗೆ ಪಟ್ಟ ಕಟ್ಟಿದನು. ದುರ್ಯೋಧನನ ಈ ಕೃತ್ಯದ ಹಿಂದೆ ದಿಟ ಸ್ನೇಹಕ್ಕಿಂತ ರಾಜತಂತ್ರವು ಅಡಗಿರುವುದು ಕಾಣುತ್ತದೆ. ಅಂದರೆ, ಕರ್ಣಪಟ್ಟವಾಗಿದ್ದರೆ ಭೀಷ್ಮ, ದ್ರೋಣ, ಹಲವು ರಾಜರು ಮತ್ತು ಸಾಮಂತರ ಬೆಂಬಲ ಸಿಗದೇ ಹೊಗುತ್ತಿತ್ತು ಎಂಬ ಯುದ್ಧತಂತ್ರ ಸಮ್ಮಿಳಿನಗೊಂಡಿದೆ ಎನಿಸುತ್ತದೆ.[10]

ಇಲ್ಲಿ ದುರ್ಯೋಧನನ ನಡೆ ಇಬ್ಬಗೆಯಂತೆ, ಸಿಂಹಾಸನ ರಕ್ಷಣೆಗೆ ಕರ್ಣನನ್ನು ಬಲಿಪ್ರಾಣಿಯಂತೆ ಬಳಸಿದಂತೆ ತೋರುವುದು. ಆದರೆ, ಕರ್ಣನ ರಣವಧೆಯ ಬಳಿಕ ದುರ್ಯೋಧನನ ಮನಮರುಗಿ ತುಟಿ ತೆರೆಯಿತು. ಕರ್ಣ ಶೂನ್ಯತೆ ಆತನನ್ನು ಬಾಧಿಸಿತು. ಪಾಪಪ್ರಜ್ಞೆ ಆತನ ಮೌನವನ್ನು ಸೀಳಿತು. 'ಧರ್ಮರಾಯನು ನೀನು ಅವನ ಜೊತೆಯಲ್ಲಿ ಹುಟ್ಟಿದವನೆಂಬುದನ್ನು ತಿಳಿಯನು. ಸಹಜವಾಗಿಯೇ ನೀನು ಯಾರೆಂಬುದನ್ನು ನಾನು ಬಲ್ಲೆ: ಮೊದಲು ತಿಳಿದಿದ್ದರೂ ನನ್ನ ದೊರೆತನವನ್ನು ನಾನು ನಿನಗೇಕೆ ಕೊಡಲಿಲ್ಲ? ನಿನಗೆ ತಿಳಿಯಪಡಿಸುವುದಕ್ಕೂ ಇಷ್ಟಪಡಲಿಲ್ಲ? ಸ್ವಕಾರ್ಯಸಾಧನೆಗಾಗಿ ಪ್ರೀತಿಸುವ ಹಾಗೆ (ನಟಿಸಿ) ಪಾಂಡವರ ಮೇಲಿನ ಕೋಪದಿಂದ ನಿನ್ನನ್ನು ನಾನೇ ಕೊಂದೆನು. ಪಾಂಡವರು ನಿನ್ನನ್ನು ಕೊಂದರೇನು?'[11] ಎಂಬ ಈ ಮಾತುಗಳೇ ವಾಸ್ತವ ಸಂಗತಿಯನ್ನು ಸಾಕ್ಷೀಕರಿಸುತ್ತವೆ. ಇವೆಲ್ಲವೂ ಕರ್ಣನ ಸ್ವಯಂಕೃತ ಅಪರಾಧವಲ್ಲ. ಅವನು ಪರಿಸ್ಥಿತಿಯ ಶಿಶುವಾಗಿ ಅವರಾಡಿಸಿದಂತೆ ಆಡಬೇಕಾಯಿತು ಎಂಬುದನ್ನು ಅನಾವರಣಗೊಳಿಸುತ್ತದೆ.

ಕರ್ಣನು ಕೃಷ್ಣ ಸಾರಥ್ಯಕ್ಕೆ ಸಮಬಲನಾಗಿ ಶಲ್ಯನನ್ನು ಸಾರಥಿಯಾಗಿಸಿಕೊಂಡು ಯುದ್ಧ ಮುಂದುವರೆಸಬೇಕೆಂಬ ಭೀಷ್ಮರ ಸಲಹೆಯನ್ನು ದುರ್ಯೋಧನನ ಪ್ರಯತ್ನದ ಮೂಲಕ ಪೂರೈಸಿಕೊಂಡನು. ಈ ಸಮಯದಲ್ಲಿ ಶಲ್ಯನು ಕುಲದ ನೆಲೆಯ ಮಾತುಗಳಿಂದ ಕರ್ಣನನ್ನು ಹೀಯಾಳಿಸಿ ಜೋಳದ ಋಣಕ್ಕಾಗಿ ಶರತ್ತು ಮುಂದಿಟ್ಟು ಸಾರಥಿಯಾದನು. ಕರ್ಣನು ತನ್ನ ಶೌರ್ಯ, ನಿಷ್ಠೆ, ಕಾಳಜಿಗಳಿಂದಾಗಿ ಹಲವು ಸ್ಥಾನಗಳಿಗೆ ಅರ್ಹನಿದ್ದರೂ ಕುಲದ ನೆಲೆಯನ್ನು ಮುಂದಾಗಿಸಿ ತಿರಸ್ಕರಿಸಿ ಅವಮಾನಿಸಲಾಯಿತು. ಇದು ಶಸ್ತ್ರ ವಿದ್ಯಾ ಪ್ರದರ್ಶನ, ಭೀಷ್ಮ ಪಟ್ಟಾಭಿಷೇಕ ದಿನದ ಬಳಿಕ ಶಲ್ಯ ಸಾರಥಿಯಾಗುವ ಸನ್ನಿವೇಶದಲ್ಲೂ ಆವರ್ತನಗೊಂಡಿದೆ. ಸ್ಥಾನಕ್ಕೆ ಅರ್ಹತೆಯಿರುವ ಕೆಳಜಾತಿಯವರ ಅಧೀನದಲ್ಲಿ ಮೇಲ್ಜಾತಿಯವರು ಸೇವೆ ಮಾಡಲು ತೋರಿದ ಅಸಹನೆ ಅಸಹಕಾರಕ್ಕೆ ಈ ಸನ್ನಿವೇಶ ಸಾಕ್ಷಿಯಾಗಲ್ಪಟ್ಟು ಕರ್ಣ ವೇದನೆಯ ಸರದಿ ಮುಂದುವರೆಯಿತು. ಇಲ್ಲಿ ಪಂಪನ ಯಾತನೆ ಕರ್ಣ ಯಾತನೆಯಾಗಿ ಒಡಮೂಡಿದೆ ಎನಿಸುತ್ತದೆ. ತಲಾಂತರದಿಂದ ಕ್ರೋಢೀಕೃತಗೊಂಡ ಅವಕಾಶ, ರಾಜತ್ವ ಹಾಗೂ ಅಕ್ಷರಾಧಿಕಾರತ್ವದ ಹಕ್ಕು ಸ್ವಾಮ್ಯಗಳು ಕ್ಷೀಣಿಸುವ ಆತಂಕವು ಎದುರುಗೊಂಡಾಗ ದ್ರೋಣ, ಅಶ್ವತ್ಥಾಮ, ಶಲ್ಯರಂತಹ ಮೇಲ್ಸಮುದಾಯಗಳ ಸಹನ ಹೀನ ಮನಸ್ಸುಗಳು ಕರ್ಣನನ್ನು ಸಹಿಸದಾದದವು.

'ಮನುಷ್ಯ, ಜನ್ಮತಾಳಿದ ನಂತರ ಆತನ ವೈಯಕ್ತಿಕ ಆಚರಣೆಗಳು ಮತ್ತು ಸಾಮಾಜಿಕ ಸಂಬಂಧಗಳು ಇವೆರಡರಲ್ಲಿ ಆತ ನಿಲುಕುತ್ತಾನೆ. ಕೆಲವು ಸಲ ಆತನ ನಿಯಂತ್ರಣದಲ್ಲಿ ಇರದ ಪ್ರಸಂಗಗಳಲ್ಲಿ ಪರಾಧೀನವಾಗಿ ಸಿಲುಕುತ್ತಾನೆ. ಮತ್ತು ಕೃತಿಗಳು ಆತನಿಂದ ಸಾಗಿಹೋಗುತ್ತವೆ.'[12] ಅಂತೆಯೆ, ಕನ್ಯೆ ಕುಂತಿಗೆ ಜನಿಸಿ ಕಾನೀನನಾದ ಕರ್ಣನು ಜಾತಿ ಶ್ರೇಣಿಯಲ್ಲಿ ಕೆಳ ಸ್ತರದವರ ಮಗುವಾಗಿ ಬೆಳೆದನು. ಇದೊಂದೇ ಸಂಗತಿಯಿಂದಾಗಿ ಕರ್ಣನು ತಿರಸ್ಕಾರಕ್ಕೆ, ಭೇದನಕ್ಕೆ, ಅವಮಾನಕ್ಕೆ, ಪ್ರಾಣಬಲಿಗೆ ಒಳಗಾದನು. ಸ್ವಾಮಿನಿಷ್ಠೆ, ಸ್ನೇಹ, ನನ್ನಿ, ದಾನ–ತ್ಯಾಗ ಹಾಗೂ ಸೋದರ ಪ್ರೇಮಗಳು ಕರ್ಣ ಮಾದರಿಗಳೇ ಆದರೂ ದ್ರೋಣ, ದುರ್ಯೋಧನ, ಕೃಷ್ಣ, ಕುಂತಿ, ಶಲ್ಯ ಮೊದಲಾದವರ ಸ್ವಹಿತಾಸಕ್ತಿಗೆ ಬಲಿಯಾದವು. ಪರಿಣಾಮವಾಗಿ ಕರ್ಣನ ವರ್ತನೆಯ ಪ್ರಾಮಾಣಿಕತೆಗೆ ಶಂಕೆ ಬರುವಂತಾಯಿತು. ಏಕಗ್ರಾಹಿಯಾಗಿ ಚಿಂತಿಸಿ, ಒರಟುತನದ ವಿರೋಧ ವರ್ತನೆ ತೋರಬೇಕಾಯಿತು. ಆದರೆ, ಸಾಲು ಸಾಲು ಪ್ರತಿಕೂಲ ಪರಿಸ್ಥಿತಿಯಲ್ಲೂ ತನ್ನ ತ್ಯಾಗ, ನಿಷ್ಠೆ, ದಾನ ಗುಣವನ್ನು ಮೆರೆದ ಕರ್ಣನು ಪಂಪ ಸೃಷ್ಟಿಸಿದ ದುರಂತ ನಾಯಕನಾಗಿದ್ದಾನೆ.

[8] ಕಲಬುರ್ಗಿ ಎಂ.ಎಂ; ಮಾರ್ಗ ಸಂಪುಟ–1, ಪು.120.

[9] ಎಸ್.ವಿ. ಪರಮೇಶ್ವರ ಭಟ್ಟ; ಪಂಪನು ಬೆಳಗಿರುವ ಲೌಕಿಕದ ಒಂದು ಚಿತ್ರ, ಆಯ್ದ ಆರು ಲೇಖನಗಳು ಪು. 05

[10] ಕೆ.ವೈ. ನಾರಾಯಣ ಸ್ವಾಮಿ; ಪಂಪ ಭಾರತ ನಾಟಕದ ಆಯ್ದ ಭಾಗ; ಕಲಾ ಗಂಗೋತ್ರಿ–2,2019, ಬಿ.ಎ., ಬಿ.ಎಸ್.ಡಬ್ಲ್ಯೂ., ಬಿಬಿಎ ಕನ್ನಡ ಪಠ್ಯ, ಮೈಸೂರು ವಿ.ವಿ.

[11] (ತ್ರಯೋದಶಾಶ್ವಾಸಂ– ಪ.5)

[12] ಇರಾವತಿ ಕರ್ವೆ; ಯುಗಾಂತ; ಅನು: ಸರಸ್ವತೀ ಗಜಾನನ ರಿಸಬೂಡ, ಪು.156.

**ಗ್ರಂಥ ಸೂಚಿ**


1. ಪಂಪ ಮಹಾಕವಿ ವಿರಚಿತ ಪಂಪಭಾರತಂ, ಗದ್ಯಾನುವಾದ: ಎನ್. ಅನಂತರಂಗಾಚಾರ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2013.
2. ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿಗೆ–1, ಸಿ. ವೀರಣ್ಣ, ನವಕರ್ನಾಟಕ ಪಬ್ಲಿಕೇಷನ್ಸ್ (ಪ್ರೈ) ಲಿಮಿಟೆಡ್, ಬೆಂಗಳೂರು, 1986.
3. ಮಾರ್ಗ, ಸಂಪುಟ–1, ಎಂ.ಎಂ. ಕಲಬುರ್ಗಿ, ನರೇಶ್ ಅಂಡ್ ಕಂಪನಿ, ಬೆಂಗಳೂರು, 1988.
4. ಪಂಪ ಒಂದು ಅಧ್ಯಯನ, ಸಂ: ಜಿ.ಎಸ್. ಶಿವರುದ್ರಪ್ಪ, ಸ್ವಪ್ನ ಬುಕ್ ಹೌಸ್, ಬೆಂಗಳೂರು, 2016
5. ಆರು ಆಯ್ದ ಲೇಖನಗಳು, ಎಸ್.ವಿ. ಪರಮೇಶ್ವರ ಭಟ್ಟ, ಅರ್ಕಾವತಿ ಪ್ರಕಾಶನ, ಮೈಸೂರು, 1980.
6. ಪರಂಪರೆ, ಸುಜನಾ, ಮೈತ್ರಿ ಪ್ರಕಾಶನ, ಮೈಸೂರು, 1982.
7. ಡಾ. ರಂ.ಶ್ರೀ. ಮುಗಳಿ ಚಿತ್ರಿಸಿದ ಪಂಪ ರನ್ನರು, ಸಂ: ಡಾ. ಶ್ರೀನಿವಾಸ ಹಾವನೂರ, ಅತ್ತಿಮಬ್ಬೆ ಪ್ರಕಾಶನ, ಮೈಸೂರು, 2006.
8. ಕಲಾ ಗಂಗೋತ್ರಿ–2,2019, ಬಿ.ಎ., ಬಿ.ಎಸ್.ಡಬ್ಲ್ಯೂ., ಬಿಬಿಎ ಕನ್ನಡ ಪಠ್ಯ, ಮೈಸೂರು ವಿ.ವಿ.,2019
9. ಪಂಪ ಒಂದು ಒಳನೋಟ, ಸಂ: ಸಿ.ಪಿ.ಕೃಷ್ಣಕುಮಾರ್ (ಸಿ.ಪಿ.ಕೆ), ಪ್ರಸರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು, 2010.
10. ಯುಗಾಂತ, ಇರಾವತಿ ಕರ್ವೆ, ಅನು:ಸರಸ್ವತೀ ಗಜಾನನ ರಿಸಬೂಡ, ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಪ್ರಕಟಣೆ–14, ಸಾಹಿತ್ಯ ಮಾಲೆ–13, ಬೆಂಗಳೂರು, 2007.